ಕ್ಷೇತ್ರದಲ್ಲಿ ನಡೆಯಂವ ಸಮಾರಂಭಗಳಿಗೆ ಸ್ಥಳೀಯ ಶಾಸಕರನ್ನು ಆಮಂತ್ರಿಸದಿರುವುದು

೧-೩೦ ಪಿ. ಎಂ.

ಶ್ರೀ ಬಿ. ನಾರಾಯಣಸ್ವಾಮಿ (ಬಾಗೇಪಲ್ಲಿ).—ಸೋಮೆನಹಳ್ಳಿ ಹೋಬಳಿ ಗುಡಿಬಂಡೆ ತಾಲ್ಲೂಕಿಗೆ ಸೇರಿದ್ದು ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರಕ್ಕೆ ಸೇರಿರುತ್ತದೆ. ಸೋಮೆನ ಹಳ್ಳಿಯಲ್ಲಿ ನಾಡ ಕಛೇರಿಯು ಪ್ರಾರಸಭ್ವವಾಗಿ ಸುಮಾರು ಆರು ತಿಂಗಳುಗಳ ಮೇಲಾಯಿತು. ನಾಳೆಯ ದಿವಸ ಅಂದರೆ ೪-೨-೮೭ ರಂದು ಸೋಮೇನಹಳ್ಳಿ-ಗುಡಿಬಂಡೆ ನಡುವೆ ನೇರ ಬಸ್ ಸಂಚಾರದ ಪ್ರಾರಂಭೋತ್ಸವವನ್ನು ಏರ್ಪಾಡು ಮಾಡಲಾಗಿದೆ. ಇದರ ಅಧ್ಯಕ್ಷತೆಯನ್ನು ಚಿಕ್ಕಬಳ್ಳಾಪುರ ಕ್ಷೇತ್ರದ ಶಾಸಕರಾದ ಶ್ರೀ ಕೆ. ಎಂ. ಮುನಿಯಪ್ಪನವರು ವಹಿಸಲಿದ್ದು, ನಾಡ ಕಛೇರಿಯ ವಿದ್ಯುಕ್ತ ಉದ್ಘಾಟನೆಯನ್ನು ಪಶುಸಂಗೋಪನೆ ಹಾಗೂ ಮೀನುಗಾರಿಕೆ ಸಚಿವರಾದ ಶ್ರೀ ಕೆ. ಎಂ. ಕೃಷ್ಣಾರೆಡ್ಡಿಯವರು ನೆರವೇರಿಸಲಿದ್ದು, ನೇರ ಬಸ್ ಸಂಚಾರವನ್ನು ಕ. ರಾ. ರ. ಸಾ. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಬಿ. ಪ್ರಭಾಕರ್ ರವರು ಉದ್ಘಾಟನೆ ಮಾಡುತ್ತಾರೆ. ನನ್ನ ಮತಕ್ಷೇತ್ರವಾದ ಬಾಗೇಪಲ್ಲಿಯಲ್ಲಿ ಬರುವ ಸೋಮೇನ ಹಳ್ಳಿಯಲ್ಲಿ ನಡೆಯಲಿರುವ ಈ ಸಮಾರಂಭಕ್ಕೆ ಕ್ಷೇತ್ರದ ಶಾಸಕನಾದ ನನ್ನನ್ನು ಆಮಂತ್ರಿಸಿಲ್ಲ. ನಾಡ ಕಛೇರಿಯ ಉದ್ಘಾಟನೆಯ ವೇಳೆಯಲ್ಲೂ ನನ್ನನ್ನು ಆಮಂತ್ರಿಸಿಲ್ಲ. ಮತಕ್ಷೇತ್ರದಲ್ಲಿ ನಡೆಯುವ ಯಾವುದೇ ಸಮಾರಂಭಗಳಿಗೆ ಸಂಬಂಧಪಟ್ಟ ಶಾಸಕರುಗಳನ್ನು ಆಮಂತ್ರಿಸಬೇಕೆಂದು ಹಿಂದೆ ಸರ್ಕಾರ ಅಧಿಕಾರಿಗಳಿಗೆ ತಿಳಿಸಿದ್ದಿತು. ಆದರೆ ಈ ಎರಡೂ ಸಮಾರಂಭಗಳಲ್ಲಿ ನನ್ನನ್ನು ಆಮಂತ್ರಿಸಿರುವುದಿಲ್ಲ. ಇದನ್ನು ಉದ್ದೇಶಪೂರ್ವಕವಾಗಿಯೇ ಮಾಡಲಾಗಿದೆ. ಇದರಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಸ್ಥಳೀಯ ಜನತಾಪಕ್ಷದವರೂ ಸಹ ಭಾಗಿಯಾಗಿದ್ದು ಇದನ್ನು ಉದ್ದೇಶಪೂರ್ವಕವಾಗಿಯೇ ಮಾಡಲಾಗಿದೆ. ಸ್ಥಳೀಯ ಶಾಸಕನಾದ ನನ್ನನ್ನು ಆಮಂತ್ರಿಸದೆ ನಡೆಯುತ್ತಿರುವ ಈ ಸಮಾರಂಭವನ್ನು ಕೂಡಲೇ ರದ್ದುಗೊಳಿಸ ಬೇಕೆಂದು ನಾನು ಸರಕಾರದವರನ್ನು ಒತ್ತಾಯಿಸುತ್ತೇನೆ. ಪ್ರಜಾಪ್ರಭುತ್ವ ರಾಜಕೀಯದ ಪಾಠಗಳನ್ನಾಡುವ ಸರಕಾರವು ಕೂಡಲೆ ಸಮಾರಂಭವನ್ನು ರದ್ದುಗೊಳಿಸುತ್ತದೆಂದು ನಾನು ನಂಬಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ಥಳೀಯ ಶಾಸಕರನ್ನು ಕಾರ್ಯಕ್ರಮದಲ್ಲಿ ಕರೆಯಬೇಕೆನ್ನುವ ಸರಕಾರದ ಆದೇಶ ಕೂಡ ಇದೆ. ಮಾನ್ಯ ಸದಸ್ಯರು ಸಮಾರಂಭಕ್ಕೆ ಕರೆಯಬೇಕೆಂದು ಹೇಳುತ್ತಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ನಮ್ಮದು ನಿಮ್ಮದು ಹಳ್ಳಿ ಒಂದೇ ಇದೆ. ಆ ಹಳ್ಳಿಯನ್ನು ಅಧಿಕಾರಿಗಳು ತಪ್ಪಿಸುತ್ತಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ.

ಶ್ರೀ ಆರ್. ವೆಂಕಟರಾವಮಯ್ಯ.—ನಾನು ಕೂಡ ಈ ಬಗ್ಗೆ ನೋಟೀಸ್ ಕೊಟ್ಟಿದ್ದೇನೆ. ಸ್ಥಳೀಯ ಶಾಸಕರನ್ನು ಸಮಾರಂಭಗಳಿಗೆ ಕರೆಯಬೇಕು. ಕರೆಯದಿದ್ದರೆ ಶಾಸಕರಿಗೆ ಅಪಮಾನ ಮಾಡಿದಂತಾಗುತ್ತದೆ. ಶಾಸಕರನ್ನು ಕರೆಯದಿದ್ದರೆ ಸಮಾರಂಭವನ್ನು ರದ್ದು ಮಾಡಬೇಕು.

ಅಧ್ಯಕ್ಷರು.—ಶಾಸಕರನ್ನು ಕರೆಯಬೇಕೆಂದು ಸರ್ಕಾರದ ಆದೇಶವಿದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ನಾನು ಕೋಲಾರ ಜಿಲ್ಲೆಯಲ್ಲಿ ಪ್ರವಾಸ ಮಾಡಿದ್ದೇನೆ. ಮಾನ್ಯ ನಾರಾಯಣಸ್ವಾಮಿಯವರು ನನ್ನ ಕಾರಿನಲ್ಲಿ ನನ್ನ ಜೊತೆಯಲ್ಲಿಯೇ ಇದ್ದರು. ನಾನು ಅವರನ್ನು ಕರೆದುಕೊಂಡು ಹೋಗಿದ್ದೇನೆ. ಅವರು ಸಮಾರಂಭದಲ್ಲಿ ಭಾಗವಹಿಸಿದ್ದಾರೆ. ಈಗ ಈ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದಾರೆ. ಯಾವ ಅಧಿಕಾರಿಗಳು ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ನಾಳೆ ಏನು ಕಾರ್ಯಕ್ರಮವಿದೆ ಅದಕ್ಕೆ ಅವರಿಗೆ ಆಮಂತ್ರಣ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಅವರನ್ನು ಕರೆದುಕೊಂಡು ಹೋಗಲಿಕ್ಕೆ ಪ್ರಯತ್ನ ಮಾಡುತ್ತೇನೆ.

ತೆಲುಗು ಗಂಗಾ ಯೋಜನೆ ಬಗ್ಗೆ

ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ).—ನಿಯಮ ೩೫೪ರ ಪ್ರಕಾರ ''ಕೃಷ್ಣಾ ಜಲ ನಯನದಲ್ಲಿ ಈಗಾಗಲೇ ತಮ್ಮ ಪಾಲಿನ ನೀರಿನ ಹಕ್ಕನ್ನು ಆಂಧ್ರಪ್ರದೇಶವು ಬಳಸಿ ನೀರಾವರಿ ಯೋಜನೆಗಳನ್ನು ಸಿದ್ಧಪಡಿಸಿರುವ ಕಾರಣ ಯಾವುದೇ ರೀತಿಯಲ್ಲಿ ಹೆಚ್ಚಿನ ನೀರಾವರಿ ಯೋಜನೆಗಳನ್ನು ರೂಪಿಸುವ ಅಧಿಕಾರ ಆಂಧ್ರಪ್ರದೇಶ ಸರ್ಕಾರಕ್ಕೆ ಇರುವುದಿಲ್ಲ. ಮದ್ರಾಸ್ ನಗರಕ್ಕೆ